ದಿನಾಂಕಃ 09-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎನ್.ಬಿ.ಕೆ. ವಕೀಲರಿಂದ:</u>

ದಾವಾ ಆಸ್ತಿಯ ಸ್ವಾಧೀನ ಕೊಡಿಸುವಂತೆ ಈ ದಾವೆಯನ್ನು ಸಲ್ಲಿಸಿರುತ್ತೇನೆ. ಒಟ್ಟು 28 ಗುಂಟೆ ಪ್ರತಿವಾದಿಯರು ಅತಿಕ್ರಮಣ ಮಾಡಿರುತ್ತಾರೆ. ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ಸಲ್ಲಿಸಿರುತ್ತೇನೆ. ಜಮೀನು ಸರ್ವೆ ನಂ.107/1 ಬಿ ಕ್ಷೇತ್ರ 33 ಗುಂಟೆ ನನಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿ. ಸದರಿ ಜಮೀನಿನ ಪೂರ್ವಕ್ಕೆ ಪ್ರತಿವಾದಿಯರು ಒಟ್ಟು 28 ಗುಂಟೆ ಜಮೀನನ್ನು ಅತಿಕ್ರಮಣ ಮಾಡಿರುತ್ತಾರೆ ಎಂದು ವಾದ ಪತ್ರದಲ್ಲಿ ಹೇಳಿ ಬರೆಸಿರುತ್ತೇನೆ. ದಾವಾ ಸಲ್ಲಿಸಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನನ್ನ ವಾದ ಪತ್ರದೊಂದಿಗೆ ಸಲ್ಲಿಸಿದ ಕಚ್ಚಾ ನಕಾಶೆಯನ್ನು ನನ್ನ ಹೇಳಿಕೆಯ ಮೇರೆಗೆ ವಕೀಲರು ತಯಾರಿಸಿರುತ್ತಾರೆ. ನಕಾಶೆಯಲ್ಲಿ ತೋರಿಸಿದ ಎಜಿಎಚ್‌ಡಿ ಎಂದು ಗುರುತಿಸಿದ ಆಸ್ತಿಯನ್ನು ಪ್ರತಿವಾದಿಯರು ಅತಿಕ್ರಮಣ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಕೀಲರಿಗೆ ತಪ್ಪು ಮಾಹಿತಿಯನ್ನು ನೀಡಿ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ನಾನು ಮತ್ತು ಪ್ರತಿವಾದಿಯರು ನಮ್ಮ ನಮ್ಮ ಜಮೀನುಗಳಲ್ಲಿ ಸುಮಾರು 50 ವರ್ಷಗಳಿಂದ ಕಬ್ಜಾ ವಹಿವಾಟು ಮಾಡುತ್ತಾ ಬಂದಿರುತ್ತೇವೆ. 50 ವರ್ಷಗಳಿಂದ ನಮ್ಮ ಮತ್ತು ಪ್ರತಿವಾದಿಯರ ಮಧ್ಯೆ ಯಾವುದೇ ತಂಟೆ ತಕರಾರು ಇರುವುದಿಲ್ಲ. ನನ್ನ ಮತ್ತು ಪ್ರತಿವಾದಿಯರ ಜಮೀನುಗಳು ಒಂದಕ್ಕೊಂದು ಹೊಂದಿಕೊಂಡಿವೆ ಎಂದರೆ ಸರಿ. ಈ ದಾವೆ ಚಾಲ್ತಿಯಲ್ಲಿರುವಾಗ ನಮ್ಮ ಮತ್ತು ಪ್ರತಿವಾದಿಯರ ಜಮೀನುಗಳ ಮಧ್ಯೆ ಇರುವ ಒಡ್ಡಿನ ಮೇಲೆ ಇರುವ ಗಿಡಗಳನ್ನು ಕಡಿದಿರುತ್ತೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಪ್ರತಿವಾದಿಯರು ನನ್ನ ವಿರುದ್ಧ ಪೋಲಿಸ ದೂರು ನೀಡಿದ್ದರು ಎಂದರೆ ಸರಿಯಲ್ಲ. ಗಿಡಗಳನ್ನು ಕಡಿದು, ಅತಿಕ್ರಮಣ ಮಾಡಿದ ಆಸ್ತಿಯಲ್ಲಿ ರಸ್ತೆ ನಿರ್ಮಾಣ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ಒಟ್ಟು 3 ಎಕರೆ 23 ಗುಂಟೆ ಜಮೀನಿನಲ್ಲಿ ಕ್ಷೇತ್ರ 1 ಎಕರೆ 30 ಗುಂಟೆ ಜಮೀನನ್ನು ಒಬ್ಬ ಮಾರುತಿ ಕವಣಿ ಇವರಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ಆ ಸಮಯದಲ್ಲಿ ಜಮೀನು ಅಳತೆ ಮಾಡಿ ಪಿ ಟಿ ಶೀಟ್ ತಯಾರಿಸಿದ ನಂತರ ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ಸೀಮೆ ಕಲ್ಲುಗಳು

ಮೊದಲಿನಿಂದಲೂ ನಮ್ಮ ಜಮೀನಿನಲ್ಲಿವೆ ಎಂದರೆ ಸರಿ. ನನ್ನ ಮತ್ತು ನಾನು ಮಾರಾಟ ಮಾಡಿದ ಜಮೀನಿನ ಮಧ್ಯದಲ್ಲಿ ಹದ್ದುಬಸ್ತು ಕಲ್ಲುಗಳು ಇವೆ ಎಂದರೆ ಸರಿಯಲ್ಲ. ನಾನು ಮಾರುತಿ ಇವರಿಗೆ ಮಾರಾಟ ಮಾಡಿದ ಜಮೀನು ಉತ್ತರ ದಿಕ್ಕಿಗೆ ಇರುತ್ತದೆ. ನನ್ನ ಮತ್ತು ಸದರಿ ಮಾರುತಿ ಕವಣಿ ಇವರ ಜಮೀನಿಗೆ ಹೋಗಿ ಬರಲು ಪೂರ್ವಕ್ಕೆ ದಾರಿ ಇರುತ್ತದೆ. ದಿನಾಂಕಃ 10-01-2019 ರಂದು ನಾನು ಆಸ್ತಿಯ ಸರ್ವೆ ಮಾಡಿಸಿದ ವರದಿ ಸರಿ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಸರ್ವೆ ವರದಿಯ ವಿರುದ್ಧ ಪ್ರತಿವಾದಿಯರು ಮೇಲ್ಮನವಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಆ ಬಗ್ಗೆ ತಡೆಯಾಜ್ಞೆ ಆದೇಶ ಇರುತ್ತದೆ ಎಂದರೆ ಸರಿ. ತಡೆಯಾಜ್ಞೆ ಇದ್ದಾಗೂ ನಾನು ಬದುವಿನ ಮೇಲೆ ಇರುವ ಗಿಡಗಳನ್ನು ಕಡಿದಿರುತ್ತೇನೆ ಎಂದರೆ ಸರಿಯಲ್ಲ.

ಪ್ರತಿವಾದಿಯರು ಯಾವ ಕಾಲಕ್ಕೂ ನನ್ನ ಜಮೀನು ಕ್ಷೇತ್ರ 28 ಗುಂಟೆ ಜಮೀನು ಒತ್ತುವರಿ ಮಾಡಿಲ್ಲ ಎಂದರೆ ಸರಿಯಲ್ಲ. ಸರ್ವೆ ಅಧಿಕಾರಿಗಳೊಂದಿಗೆ ಮಿಲಾಪೆಯಾಗಿ ಖೊಟ್ಟಿ ಪಿ.ಟಿ ಶೀಟ್ ತಯಾರಿಸಿ ಹಾಜರಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಸಲ್ಲಿಸಿದ ಮೇಲ್ಮನವಿ ಪುರಸ್ಕಾರಗೊಂಡು, ಸರ್ವೆ ಅಧಿಕಾರಿಗಳು ಪಿ ಟಿ ಶೀಟ್ ರದ್ದುಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಮೇಲ್ಮನವಿ ಸಲ್ಲಿಸಿದ ನೋಟಿಸಿನ ಪ್ರತಿಯನ್ನು ಹಾಜರಪಡಿಸಿಲ್ಲ. ನನ್ನ ಮತ್ತು ಪ್ರತಿವಾದಿಯರ ಜಮೀನುಗಳ ಮಧ್ಯೆ ಹದ್ದುಬಸ್ತಿ ತಕರಾರು ಇರುವುದರಿಂದ, ಆ ಬಗ್ಗೆ ತಡೆಯಾಜ್ಞೆ ಇದ್ದರೂ ಅದರ ಪಾಲನೆ ನಾನು ಮಾಡಿಲ್ಲ ಎಂದರೆ ಸರಿಯಲ್ಲ. ಮಹಾಲಿಂಗಪೂರ ಪೋಲಿಸರು ಸ್ಥಳ ತನಿಖೆ ಮಾಡಿದ ನಂತರ ನನ್ನ ವಿರುದ್ಧ ಪ್ರಕರಣ ದಾಖಲು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಂಗತಿಗಳನ್ನು ಹೇಳಿಕೊಂಡು ಪ್ರತಿವಾದಿಯರ ವಿರುದ್ಧ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ASHAPPA Digitally signed by ASHAPPA Date: 2025.07.09 16:00:27 +0530

ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಪ್ರ.ದ.ನ್ಯಾ.ದಂ.ಗಳು, ಬನಹಟ್ಟಿ